**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ</u>**

**<u>ಸಿ.ಸಿ.ನಂ. : 377/2022</u>**

<u>ಫಿರ್ಯಾಧಿದಾರರುಃ</u> - ರಾಜ್ಯದ ಪರವಾಗಿ ಸಬ್ ಇನ್ಸ್ ಪೆಕ್ಟರ್ ಆಫ್ ಪೊಲೀಸ್, ಟಿ.ಬಿ.ಡ್ಯಾಂ ಪೊಲೀಸ್ ಠಾಣೆ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

ವಿರುದ್ಧ

ಆಪಾಧಿತರು :-

1. ಸೂವೆಂದು ಚಕ್ರಭಾರತಿ ತಂದೆ ಹರಿಪಾದ, ವಯಸ್ಸುಃ 53 ವರ್ಷ, ವಾಸಃ ಓಬ್ರಾ, ಚೋಪಾನ್ ತಾಲೂಕು, ಸೊನಭದ್ರ, ಉತ್ತರ ಪ್ರದೇಶ,
2. ನಾಗವೇಣಿ ಚಕ್ರಭಾರತಿ, ಗಂಡ ಸೂವೆಂದು ಚಕ್ರಭಾರತಿ, ವಯಸ್ಸುಃ 50 ವರ್ಷ,, ವಾಸಃ 30ನೇ ವಾರ್ಡ ನಿಶಾನಿ ಕ್ಯಾಂಪ್, ಟಿ.ಬಿ.ಡ್ಯಾಂ, ಹೊಸಪೇಟೆ

ನಾನು ತೃಪ್ತಿ. ಧರಣಿ. ಬಿ.ಎ. ಎಲ್.ಎಲ್.ಎಂ., ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸಪೇಟೆ, ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

## <u>ದೋಷರೋಪಣೆ</u>

ದಿನಾಂಕಃ 05-04-2022 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಟಿ.ಬಿ. ಡ್ಯಾಂ ಪೋಲಿಸ್ ಠಾಣಾ ಸರಹದ್ದಿನಲ್ಲಿ ಬರುವ ನಿಶಾನಿ ಕ್ಯಾಂಪ್ ಏರಿಯಾದಲ್ಲಿ ಸಾಕ್ಷಿ-1-ನಾಗವರ ಪ್ರಸಾದ ಮತ್ತು ಅವರ ಹೆಂಡತಿ ಸಾಕ್ಷಿ-4-ಲಲಿತ .ಪಿ. ರವರು ತಮ್ಮ ಗುಡಿಸಲು ಮನೆಗೆ ಹಿಂದೆ ನಿಂತಿದ್ದಾಗ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ, ಸದರಿ ಸಾಕ್ಷಿ-1 ಮತ್ತು 4 ರವರೊಂದಿಗೆ ಜಗಳ ತೆಗೆದು ಅವರಿಗೆ ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನು ಉಂಟು ಮಾಡಲೆಂಬ ಅಥವಾ ಇತರ ಯೊವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34

ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ, ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ಮತ್ತು 4 ರವರಿಗೆ 'ನೀವು ಮನೆಯ ಹಿಂದಿನ ಜಾಗ ಕೊಡದೇ ಇದ್ದರೆ ಪಿಸ್ತೂಲ್ ನಿಂದ ಕೊಲೆ ಮಾಡುವುದಾಗಿ' ಪ್ರಾಣ ಬೆದರಿಕೆ ಹಾಕಿ, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.**506** ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ, ಸದರಿ ಸಾಕ್ಷಿದಾರರೊಂದಿಗೆ ಜಗಳ ತೆಗೆದಿದ್ದೂ ಅಲ್ಲದೇ, ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರು ವಾಪಸ್ಸು ಮನೆಗೆ ಹೋಗುತ್ತಿದ್ದಾಗ ಅವರನ್ನು ಮುಂದೆ ಹೋಗದಂತೆ ಅಕ್ರಮವಾಗಿ ಅಡ್ಡಗಟ್ಟಿ ನಿಲ್ಲಿಸಿ, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.**341** ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ, ಸದರಿ ಸಾಕ್ಷಿದಾರರೊಂದಿಗೆ ಜಗಳ ತೆಗೆದಿದ್ದೂ ಅಲ್ಲದೇ, ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರು ವಾಪಸ್ಸು ಮನೆಗೆ ಹೋಗುತ್ತಿದ್ದಾಗ ಕೈಗಳಿಂದ ಬೆನ್ನಿಗೆ ಹೊಡೆದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.**323** ಸಹವಾಚಕ ಕಲಂ.34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ: 1: ನಿಮಗೆ ಈಗ ಓದಿ ಹೇಳಿದ ಆಪಾದನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ ಆ-1

ಪ್ರಶ್ನೆ: 2: ನೀವು ಅಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇಸನ್ನು ನಡೆಸುತ್ತೀರಾ?

ಉತ್ತರಃ ಆ-1

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು ಸದರಿ ಹೇಳಿಕೆಯು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ).

ದಿಃ 15-07-2022.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಹೊಸಪೇಟೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ**

**ಸಿ.ಸಿ.ನಂ. : 377/2022**

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಸಬ್ ಇನ್ಸ್ ಪೆಕ್ಟರ್ ಆಫ್ ಪೊಲೀಸ್, ಟಿ.ಬಿ.ಡ್ಯಾಂ ಪೊಲೀಸ್ ಠಾಣೆ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

ವಿರುದ್ಧ

ಆಪಾಧಿತರು :-

1. ಸೂವೆಂದು ಚಕ್ರಭಾರತಿ ತಂದೆ ಹರಿಪಾದ, ವಯಸ್ಸುಃ 53 ವರ್ಷ, ವಾಸಃ ಓಬ್ರಾ, ಚೋಪಾನ್ ತಾಲೂಕು, ಸೊನಭದ್ರ, ಉತ್ತರ ಪ್ರದೇಶ,
2. ನಾಗವೇಣಿ ಚಕ್ರಭಾರತಿ, ಗಂಡ ಸೂವೆಂದು ಚಕ್ರಭಾರತಿ, ವಯಸ್ಸುಃ 50 ವರ್ಷ,, ವಾಸಃ 30ನೇ ವಾರ್ಡ ನಿಶಾನಿ ಕ್ಯಾಂಪ್, ಟಿ.ಬಿ.ಡ್ಯಾಂ, ಹೊಸಪೇಟೆ

ನಾನು ತೃಪ್ತಿ. ಧರಣಿ ಬಿ.ಎ. ಎಲ್.ಎಲ್.ಎಂ., ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹೊಸಪೇಟೆ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

ದೋಷರೋಪಣೆ

ಪ್ರಶ್ನೆಃ 1ಃ ನಿಮಗೆ ಈಗ ಓದಿ ಹೇಳಿದ ಆಪಾದನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ ಆ-2

ಪ್ರಶ್ನೆಃ 2ಃ ನೀವು ಅಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇಸನ್ನು ನಡೆಸುತ್ತೀರಾ?

ಉತ್ತರಃ ಆ-2

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು ಸದರಿ ಹೇಳಿಕೆಯು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ).

ದಿಃ 15-07-2022.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಹೊಸಪೇಟೆ.